ದಿಃ **09-01-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಸಾಕ್ಷಿ ತೆಲುಗು ಬಾಷಿಕಳಾಗಿದ್ದರಿಂದ ಶ್ರೀ ಎಸ್ ಹೆಚ್ ಎನ್ ವಕೀಲ ರನ್ನು ಬಾಷಂತರಕರನಾಗಿ ನೇಮಿಸಲಾಯಿತು. ವಕೀಲರಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಃ ಶ್ರೀ ಪಿಎಸ್ . ವಕೀಲರು 6 ನೇ ಪ್ರತಿವಾದಿ ಪರ ಃ**

ನನ್ನ ಮದುವೆಯಾಗಿ 59 ವರ್ಷಗಳು ಆಗಿರುತ್ತವೆ. ನನ್ನನ್ನು ಗಾಣದಾಳ ಗ್ರಾಮಕ್ಕೆ ನೀಡಿ ಮದುವೆ ಮಾಡಿಕೊಡಲಾಗಿರುತ್ತದೆ. ನನಗೆ 4 ಜನ ಮಕ್ಕಳು ಇದ್ದಾರೆ. ಮದುವೆಯಾದಾಗಿನಿಂದ ನನ್ನ ಗಂಡನ ಮನೆಯಲ್ಲಿ ವಾಸವಿದೇನೆ. ದಾಖಲೆಗಳ ಪ್ರಕಾರ 1 ನೇ ಪ್ರತಿವಾದಿ ದಾವ ಆಸ್ತಿಗಳ ಸ್ವಾದಿನತೆ ಹೊಂದಿರುವುದಾಗಿ ಕಂಡು ಬರುತ್ತದೆ ಎಂದರೆ ನಿಜ. 1 ನೇ ಪ್ರತಿವಾದಿಗೆ ಸದರಿ ಜಮಿನು ತಂದೆ ದೊಡ್ಡ ಬಡೆಪ್ಪ ಇವರಿಂದ ಬಂದಿರುತದೆ ಎಂದರೆ ನಿಜ. ನನ್ನ ತಂದೆ 1950 ರಲ್ಲಿ ತೀರಿಕೊಂಡಿರುವುದಾಗಿ ನನ್ನ ಮುಖ್ಯ ವಿಚಾರಣೆಯಲ್ಲಿ ಕಾಣಿಸಲಾದ ಸಂಗತಿಗಳು ನಿಜ ಇರುತ್ತವೆ.

2. ಸಣ್ಣ ಬಡೆಪ್ಪ ಮತು ದೊಡ್ಡ ಬಡೆಪ್ಪ ಇವರು ಸಹೋದರರು ಎಂದರೆ ನಿಜ. ನನ್ನ ತಂದೆ ಮತು ಅವರ ಸಹೊದರ ಸಣ್ಣ ಬಡೆಪ್ಪ ಇವರ ಜೀವಿತಾವದಿಯಲಿ ಕುಟುಂಬದ ಆಸ್ತಿಯಲಿ ವಿಬಾಗ ಆಗಿದೆ ಎಂದರೆ ಸರಿಯಲ್ಲ. ಸದರಿ ವಿಬಾಗದ ಪ್ರಕಾರ ನನ್ನ ತಂದೆ ಮತು ಸಣ್ಣ ಬಡೆಪ್ಪ ಪ್ರತ್ಯೇಕವಾಗಿ ತಮ್ಮ ಪಾಲಿಗೆ ಬಂದ ಜಮೀನುಗಳನು ಸಾಗುವಳಿ ಮಾಡುತ್ತಾ ಬಂದಿದ್ದರು ಎಂದರೆ ಸರಿಯಲ್ಲ. ಸದರಿ ವಿಬಾದ ಪ್ರಕಾರ ಸಣ್ಣ ಬಡೆಪ ಮತು ದೊಡ್ಡ ಬಡೆಪ್ಪ ಇವರ ಹೆಸರುಗಳು ಕುಟುಂಬದ ಆಸ್ತಿಗಳ ದಾಖಲೆಗಳಲ್ಲಿ ಪ್ರತ್ಯೇಕವಾಗಿ ದಾಖಲಾಗಿದೆ ಎಂದರೆ ಸರಿಯಲ್ಲ. 1993 ರಲ್ಲಿ ಸದರಿ ಇಬ್ಬರು ಸಹೊದರರ ನಡುಗೆ ಆದ ವಿಬಾಗದಂತೆ ದಾಖಲೆಗಳಿಗೆ ಅವರ ಹೆಸರುಗಳು ದಾಖಲಾಗಿವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮುಟೇಶನ್ ಆದೇಶವನು ನಾನು ಪ್ರಶ್ನಿಸಿರುವುದಿಲ್ಲ.

3. ದಾವೆ ದಾಖಲಿಸುವ ಸಮಯದಲಿ ದಾಖಲೆಗಳನು ನಾನು ನೋಡಿರುತೇನೆ. ಈ ದಾವೆ ದಾಖಲಿಸಿದ ನಂತರ ಸಹ ನಾನು 1993 ರ ಮುಟೇಶನ್ ಆದೇಶವನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವುದಿಲ್ಲ. ದಾವ ಆಸ್ತಿಯ ದಾಖಲೆಗಳಿಗೆ 6 ನೇ ಪ್ರತಿವಾದಿಯ ಹಸೆರು ದಾಖಲು ಇದೆ ಎಂದರೆ ನಿಜ. 6 ನೇ ಪತಿವಾದಿಯ ಹೆಸರು ದಾವ ಆಸ್ತಿಯ ದಾಖಲೆಗಳಲಿ ನಮೂದಾಗಿದ್ದನ್ನು

ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ. 6 ನೇ ಪತಿವಾದಿ ದಾವ ಆಸ್ತಿಯನು ಖರಿದಿಸಿದ ನಂತರ ಅದನು ಕೃಷಿಯೇತರ ಜಮೀನು ಎಂದು ಮಾರ್ಪಡಿಸಿಕೊಂಡ ಬಗೆ ನನಗೆ ಮಾಹಿತಿ ಇಲ್ಲ. ಆ ರೀತಿ ಕೃಪಯೇತರ ಜಮೀನು ಎಂದು ಮಾರ್ಪಾಡು ಮಾಡುವ ಮುಂಚೆ ದಿನ ಪತ್ರಿಕೆಯಲಿ ಪ್ರಕಟಣೆ ಹೊರಡಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಕೃಷಯೇತರ ಜಮೀನಾಗಿ ಮಾರ್ಪಡಿಸಿಕೊಂಡು 6 ನೇ ಪತಿವಾದಿ ಸದರಿ ಆಸ್ತಿಯಲ್ಲಿ ನಿವೇಶಗಳನು ಮಾಡಿ ಅವುಗಳಿಗೆ ರಸ್ತೆ, ಚರಂಡಿ ಹಾಗೂ ವಿದ್ಯತ್ ವ್ಯವಸ್ತೆ ಕಲ್ಪಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವ ಆಸ್ತಿಯಲ್ಲಿ ಈಗ ಒಟ್ಟು 297 ನಿವೇಶನಗಳನ್ನು ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅವುಗಳ ಪೈಕಿ 50 ರಿಂ ದ 60 ನಿವೇಶನಗಳಲಿ ಈಗಾಗಲೇ ಮನೆಗಳನು ಕಟ್ಟಲಾಗಿದೆ ಎಂದರೆ ಸಾಕ್ಷಿ ತಾನು ಆಕಡೆಗೆ ಹೋಗಿಲ್ಲ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವ ಆಸ್ತಿಯನ್ನು ಕೃಷಯೇತರ ಜಮೀನಾಗಿ ಪರಿವರ್ತಿಸಿ ನಿವೇಶನಗಳನು ಮಾಡಿ ಮಾರಾಟ ಮಾಡಿದ ವಿಷಯ ನನಗೆ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ಸದರಿ ನಿವೇಶನಗಳಲ್ಲಿ ಈಗಾಗಲೇ ಮನೆ ಕಟ್ಟಿಕೊಂಡಿರುವ ಜನರನ್ನು ಈ ದಾವೆಗೆ ಪಕ್ಷಗಾರರನಾಗಿ ಮಾಡಬೇಕಾಗುತ್ತದೆ ಎಂಬ ಕಾರಣಕೆ ಮನೆ ಕಟ್ಟಿಕೊಂಡಿದು ನನಗೆ ಗೊತ್ತಿಲ್ಲ ಎಂದು ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ.

4. ಈ ದಾವೆ ದಾಖಲಿಸುವ ಮುಂದೆ 6 ನೇ ಪ್ರತಿವಾದಿ 150 ಕ್ಕೂ ಹೆಚ್ಚು ನಿವೇಶನಗಳನ್ನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿ 2006 ರಲ್ಲಿ ದಾವ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನನಗೆ ಗೊತ್ತು. 6 ನೇ ಪ್ರತಿವಾದಿ ನಿವೇಶನಗಳನ್ನು ಮಾರಾಟ ಮಾಡಿದ ಬಗ್ಗೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. 6 ನೇ ಪ್ರತಿವಾದಿ 7 ನೇ ಪ್ರತಿವಾದಿಗೆ ಅಧಿಕಾರ ಪತ್ರ ಬರೆದು ನೀಡಿದ್ದು ನನಗೆ ಗೊತ್ತಿಲ್ಲ.

5. ದೊಡ್ಡ ಬಡೆಪ ಮತ್ತು ಸಣ್ಣ ಬಡೆಪ ಇವರಿಬ್ಬರು ಸಮಾನ ಪಾಲುದಾರರು ಎಂದರೆ ನಿಜ. ನಾನು ಬಸಮ್ಮ ಎನುವವರೊಂದಿಗೆ ಸೇರಿಕೊಂಡು ಒಎಸ್ ನಂ. 139/2018 ರಂತೆ ದಾವೆಯನು ದಾಖಲಿಸಿರುತೇನೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಯಾರು ದಾವೆ ದಾಖಲಿಸಿರುತ್ತಾರೆ ಎಂದು ತಿಳಿದುಕೂಳ್ಳಲು ನಾನು ಪ್ರಶ್ನಿಸಿರುವುದಿಲ್ಲ. ನಮ್ಮ ವಕೀಲರಿಗೂ ಸಹ ಸದರಿ ದಾವೆಯನು ದಾಖಲಿಸಿದವರ ಕುರಿತು ಪರಿಶೀಲಿಸಲು ನಾನು ಕೇಳಿರುವುದಿಲ್ಲ.

ಪ್ರಶ್ನೆಃ ನಿಮ್ಮ ಸಹಿಯನು ನಕಲು ಮಾಡಿ ನಿಮ ಹೆಸರಿನಲಿ ದಾವ ದಾಖಲಿಸಿದವರ ವಿರುದ ಕ್ರಮ ಕೈಗೊಳ್ಳಲು ಪ್ರಯತ್ನಿಸಿರುವಿರಾ?
ಉತ್ತರಃ ಇಲ್ಲ .

6. ನಾನು ಮತು ಬಸಮ್ಮ ಸೇರಿ ಒಎಸ ನಂ 139/2018 ರಂತೆ ದಾವೆ ದಾಖಲಿಸಿ ಅದನ್ನು ಪ್ರಕಾಶ ಗೌಡ ಇವರಿಂದ ಹಣ ಪಡೆದು ಹಿಂದಕೆ ಪಡೆದಿದ್ದು ಪುನಃಹ ಈ ಸುಳು ದಾವೆಯನು ದಾಖಲಿಸಿರುತೇನೆ ಎಂದರೆ ಸರಿಯಲ್ಲ. ನಮಗೆ ದಾವ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲದ ಕಾರಣ ಒಎಸ್ ನಂ 139/2018 ದಾವೆಯನು ನಾವು ಹಿಂದೆ ಪಡೆದಿವು ಎಂದರೆ ಸಾಕ್ಷಿ ಸದರಿ ದಾವೆಯ ಬಗೆ ನನಗೆ ಗೊತಿಲ್ಲ ಎಂದು ನುಡಿಯುುತ್ತಾರೆ.

7 ಈ ದಾವೆಯಲ್ಲಿಯೂ ಸಹ 6 ನೇ ಪ್ರತಿವಾದಿ ಮತ್ತು ಹಿರಿಯರೊಂದಿಗೆ ಮಾತುಕತೆ ಮಾಡಿ ಇದನು ಸಹ ಹಿಂದಕ್ಕೆ ಪಡೆಯುತೇವೆ ಎಂದು ಹೇಳಿದ್ದು ನಂತರ ಹಿಂದಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹೆಸರು ದಾವ ಆಸ್ತಿಯ ಪಹಣಿ ಪತ್ರಿಕೆಯಲಿ ದಾಖಲಿದ್ದು ಅವರ ಹಕ್ಕನ್ನು ಖಚಿತಪಡಿಸಿಕೊಂಡು 6 ನೇ ಪ್ರತಿವಾದಿ ದಾವ ಖರಿದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ತನಗೂ ಸಹ ಪಾಲು ಇದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ, 3(ಬಿ) ಬಡೆಪ್ಪ ತಂದೆ ಮುಕಣ್ಣ ದಾವ ಆಸ್ತಿಯನು 6 ನೇ ಪ್ರತಿವಾದಿಗೆ ಮಾರಾಟ ಮಾಡುತ್ತಿದ ಸಮಯದಲ್ಲಿ ನಿವೇನಾದರೂ ತಕರಾರು ಮಾಡಿದ್ದೀರಾ ಎಂಬ ಪ್ರಶ್ನೆಗೆ ಇಲ್ಲ ಎಂದು ಉತ್ತರಿಸುತ್ತಾರೆ. ದಾವೆ ದಾಖಲಿಸುವ ಸಮಯದಲಿ ದಾವ ಆಸ್ತಿಯನ್ನು ಅಬಿವೃದ್ಧಿ ಪಡಿಸಿದ್ದು ಅದರ ಮೌಲ್ಯ ಹೆಚ್ಚು ಆಗಿದ್ದರಿಂದ 6 ನೇ ಪ್ರತಿವಾದಿಯಿಂದ ಹೆಚಿನ ಹಣ ಪಡೆದುಕೂಳುವ ಉದೆಶನಿದಿಂದ ಸುಳು ದಾವೆ ದಾಖಲಿಸಿರುತೇವೆ ಎಂದರೆ ಸರಿಯಲ್ಲ. ನನಗೆ ದಾವ ಆಸ್ತಿಯಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವ ಆಸ್ತಿಯನು 6 ನೇ ಪ್ರತಿವಾದಿಗೆ ಮಾರಾಟ ಮಾಡುವ ಸಮಯದಲ್ಲಿ ದಾವ ಆಸ್ತಿಯ ಮೇಲೆ ನನಗೆ ಯಾವೊದೇ ಹಕು ಇಲ ಎಂದು ಮನಗೊಂಡು ನಾನು ತಕರಾರು ಮಾಡಿರಲಿಲ್ಲ ನಂತರ ದಾವ ಆಸ್ತಿಯನು ಅಬಿವೃದಿ ಪಡಿಸಿದ್ದರಿಂದ ಹೆಚ್ಚಿನ ಹಣ ಪಡೆದುಕೊಳುವ ಸುಳು ದಾವೆ ದಾಖಲಿಸಿರುತೇನೆ ಎಂದರೆ ಸರಿಯಲ್ಲ.

**8.** ಪ್ರತಿವಾದಿ ಚೊಳಮ್ಮ ಇವರು ನನ್ನ ಅಣ್ಣನ ಹೆಂಡತಿಯಾಗಿರುತ್ತಾರೆ. ಪ್ರತಿವಾದಿ **3(ಎ)** ಇವಳು ನಮ್ಮ ಕುಟುಂಬ ವಂಶಾವಳಿಯನ್ನು ತಹಶೀಲ್ದಾರರಿಂದ ಪಡೆದುಕೊಂಡು ನನಗೆ ನೀಡಿದು ಅದನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುತೇನೆ ಎಂದರೆ ನಿಜ. ನಾನು ಮತ್ತು ಪ್ರತಿವಾದಿ ಆಂಜಿನೆಯ, ಮುಕ್ಕಣ್ಣ, ಯಂಕಮ್ಮ ಹಾಗೂ ಸಣ್ಣ ಯಲ್ಲಮ್ಮ ಇವರ ಮದ್ಯ ಸಂಬಂದ ಚೆನ್ನಾಗಿ ಇತ್ತು ಎಂದರೆ ನಿಜ. ಅವರು ತೀರಿಕೊಂಡ ನಂತರ ಅವರ ಮಕ್ಕಳ ಮತು ನನ್ನ ಸಂಬಂದ ಚೆನ್ನಾಗಿ ಇದೆ. ಅವರ ಮನೆಯಲ್ಲಿ ಯಾವುದೇ ಕಾರ್ಯಕ್ರಮ ನಮಗೆ ಹೇಳುತ್ತಾರೆ.

**ಪಾಟೀ ಸವಾಲು ಶ್ರೀಮತಿ ಗಿರಿಜಾ ವಕೀಲರು ಸಮಯ ಕೇಳಿದ್ದರಿಂದ ಮುಂದೂಡಲಾಯಿತು.**

ಓದಿ ಹೇಳಿ ಸಹಿಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.